# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 246 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 05.04.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 246 • PRGI No:KARKAN/2023/88055 • VIJAYANAGARA • 05.04.2025 • Saturday • Page:04 • Rs:2




Good Opportunity for Branding
1,20,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038


ಜಸ್ಟಿಸ್ ಶಿವರಾಜ ವಿ. ಪಾಟೀಲ್, ಪದ್ಮಶ್ರೀ ಎಂ.ವೆಂಕಟೇಶ್‌ಕುಮಾರ್, ಕುಂ.ವೀರಭದ್ರಪ್ಪಗೆ

# ರಾಜ್ಯಪಾಲರಿಂದ ನಾಡೋಜ ಪದವಿ ಪ್ರದಾನ

# ಅಮೇರಿಕ ಕನ್ನಡಿಗರಿಗೆ ಕನ್ನಡ ಕೋರ್ಸ್

ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ। 7 ಡಿ.ಲಿಟ್, 198 ಪಿಎಚ್.ಡಿ.ಪದವಿ ಪ್ರದಾನ







## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಏ.7ರಂದು ಬಸ್ ಸಂಚಾರ ಫೋನ್ ಇನ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ(ಕೆ.ಕೆ.ಎಸ್.ಆರ್.ಟಿ.ಸಿ) ಹೊಸಪೇಟೆ ವಿಭಾಗದಿಂದ ಸಮರ್ಪಕ ಬಸ್ ಸಂಚಾರ ಕುರಿತು ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ಪ್ರಯಾಣಿಕರು, ಶಾಲಾ, ಕಾಲೇಜು ವಿದ್ಯಾರ್ಥಿಗಳು ಸಾರಿಗೆ ಬಸ್‌ಗಳ ಸಂಚಾರದಲ್ಲಿ ಉಂಟಾಗುತ್ತಿರುವ ಕುಂದು ಕೊರತೆ ಹಾಗೂ ಸಮಸ್ಯೆಗಳ ಕುರಿತು ಏಪ್ರಿಲ್.7 ರಂದು ಮಧ್ಯಾಹ್ನ 3:30 ರಿಂದ 4:30 ವರೆಗೆ ದೂರವಾಣಿ ಸಂಖ್ಯೆಗಳಾದ 7760992314, 7760992317 ಗೆ ಕರೆ ಮಾಡಿ ಸಮಸ್ಯೆಗಳನ್ನು ತಿಳಿಸಬಹುದು. ಈ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಪರಿಹಾರ ದೊರಕಿಸಿ ಕೊಡುವುದಾಗಿ ಹೊಸಪೇಟೆ ವಿಭಾಗದ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

–: ಪ್ರಯತ್ನಿಸು :–
ನೀವು ಹಲವು ಬಾರಿ
ಸೋಲಬಹುದು ಆದರೆ ನಿರಂತರ
ಪ್ರಯತ್ನ ನಿಮ್ಮನ್ನು ಎಂದೂ
ಸೋಲಲು ಬಿಡುವುದಿಲ್ಲ.


S.M.Traders & Services
Authorised Distributor for ATLAS COPCO
Portable Screw Air Compressors
for North Karnataka
Water Well and Non Water Well
Applications
Grow Your Business With Us
9686663125 - 9686663132


## ಅಮೇರಿಕದ ಕನ್ನಡಿಗರಿಗೆ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ಗೆ ಒಪ್ಪಂದ

**ಹಂಪಿ ಟೈಮ್ಸ್ ಹೊಸಪೇಟೆ**



ಸಂಶೋಧನೆಗಾಗಿಯೇ ಸ್ಥಾಪಿತವಾದ ದೇಶದ ಏಕೈಕ ವಿಶ್ವವಿದ್ಯಾಲಯ ಕನ್ನಡ ವಿಶ್ವವಿದ್ಯಾಲಯವು ಸ್ಥಾಪನೆಯಾಗಿ 34 ವರ್ಷಗಳು ತುಂಬಿವೆ. ಕನ್ನಡ ನಾಡು–ನುಡಿ, ಚರಿತ್ರೆ, ಸಂಸ್ಕೃತಿಯ ಅಧ್ಯಯನ ಮತ್ತು ಶೋಧನೆಯನ್ನೇ ತನ್ನ ಉಸಿರನ್ನಾಗಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯವು ನಿರಂತರವಾಗಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಪರವಾದ ಚಿಂತನೆಗಳನ್ನು ವಿಶಿಷ್ಟವಾಗಿ ಬೆಳಸಿಕೊಂಡು ಬಂದಿದೆ ಎಂದು ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿದರು.

ಗಣ್ಯರನ್ನು ಸ್ವಾಗತಿಸಿ ಮಾತನಾಡಿದ ಅವರು, ಕನ್ನಡ ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳು ಈ ದಿಸೆಯಲ್ಲಿ ಈಗಾಗಲೇ ವೈಯಕ್ತಿಕ ಯೋಜನೆಗಳು ಹಾಗೂ ಸಾಂಸ್ಥಿಕ ಯೋಜನೆಗಳು ಹಾಗೂ ವಿವಿಧ ಕಾರ್ಯಕ್ರಮಗಳ ಮೂಲಕ ತಮ್ಮ ಆಲೋಚನೆಗಳನ್ನು ಪ್ರಕಟಿಸುತ್ತ ಬಂದಿವೆ. ವಿಶ್ವವಿದ್ಯಾಲಯದ ವಿವಿಧ >>3

## ಭೌಗೋಳಿಕ ಪ್ರದೇಶ ಮೀರಿ ಕನ್ನಡ ವಿಸ್ತಾರಕ್ಕೆ ಡಿಜಿಟಲ್ ಸ್ಪರ್ಶ ಅಗತ್ಯ

**ಹಂಪಿ ಟೈಮ್ಸ್ ಹೊಸಪೇಟೆ**



ಕನ್ನಡ ವಿವಿಯ ಘಟಿಕೋತ್ಸವ(ನುಡಿಹಬ್ಬ)ದಲ್ಲಿ ಮೂವರು ಮಹನೀಯರಿಗೆ ನಾಡೋಜ ಪದವಿಯನ್ನಿತ್ತು ಸನ್ಮಾನಿಸಲಾಗಿದೆ. ಜಸ್ಟಿಸ್ ಶಿವರಾಜ ವಿ. ಪಾಟೀಲ್, ಪದ್ಮಶ್ರೀ ಎಂ.ವೆಂಕಟೇಶ್‌ಕುಮಾರ್, ಕುಂ.ವೀರಭದ್ರಪ್ಪ ಇವರೆಲ್ಲರೂ ಸಾರಸ್ವತಲೋಕಕ್ಕೆ ಬಹು ಪರಿಚಿತರು. ನ್ಯಾಯವಾದಿಗಳು, ಸಂಗೀತ ವಿದ್ವಾಂಸರು, ಲೇಖಕರು. ಬಹು ಸೂಕ್ತವಾದವರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಕನ್ನಡ ವಿಶ್ವವಿದ್ಯಾಲಯದ ಗೌರವವನ್ನು ಇನ್ನಷ್ಟು ಹೆಚ್ಚಿಸಿದೆ ಎಂದು ತುಮಕೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಎಚ್. ರಾಜಾಸಾಬ್ ಹೇಳಿದರು.

33ನೇ ನುಡಿಹಬ್ಬದ ಭಾಷಣದಲ್ಲಿ ಮಾತನಾಡಿದ ಅವರು, 7 ವಿದ್ಯಾರ್ಥಿಗಳು ಡಿ.ಲಿಟ್.ಪದವಿ, 189 ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ.ಪದವಿ, 90 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗಳನ್ನು ಪಡೆದಿರುತ್ತಾರೆ. ಇವರಲ್ಲಿ ವಿದ್ಯಾರ್ಥಿ ನಿಯರದೇ ಮೇಲುಗೈಯಾಗಿರುವುದು >>3

## ಕನ್ನಡ ವಿವಿ ನುಡಿಹಬ್ಬ ದೇಸಿ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ

**ಹಂಪಿ ಟೈಮ್ಸ್ ಹೊಸಪೇಟೆ**



ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಉಪಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರು ವಿಶ್ವವಿದ್ಯಾಲಯದ ಉತ್ತಮ ಶೈಕ್ಷಣಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕಿದ್ದಾರೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಾಡಿನ ಮೂವರು ಸಾಧಕರಿಗೆ ನಾಡೋಜ ಪದವಿ ಪ್ರಧಾನ ಮಾಡಿ ಮಾತನಾಡಿದರು. ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರವು ಗೌರವಾನ್ವಿತ ಕುಲಪತಿಗಳ ಅಧ್ಯಕ್ಷೀಯ ಭಾಷಣದ ಸುಮಾರು ಐದು ಸಾವಿರ ಅಪರೂಪದ ಹಸ್ತಪ್ರತಿಗಳ ಸಂಗ್ರಹವನ್ನು ಹೊಂದಿದೆ ಎಂಬುದು ಬಹಳ ಹೆಮ್ಮೆಯ ವಿಷಯ. ದೃಶ್ಯ ಕಲಾ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ರಚಿಸಿದ ಮತ್ತು ಪ್ರದರ್ಶಿಸಿದ ಕಲಾಕೃತಿಗಳು ಆಕರ್ಷಕವಾಗಿವೆ.ಬುಡಕಟ್ಟು ಅಧ್ಯಯನ ವಿಭಾಗವು ಸಂಗ್ರಹಿಸಿದ ಬುಡಕಟ್ಟು ಮಹಾಕಾವ್ಯಗಳು ನಮ್ಮ ದೇಸಿ ಕಾವ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ >>3

## ಕನ್ನಡ ವಿವಿ ಉದ್ದೇಶ ಕಲಿಸುವುದಲ್ಲ ಕಲಿಕೆಗೆ ಅವಕಾಶ ನೀಡುವುದು

### ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**



ಕನ್ನಡ ವಿಶ್ವವಿದ್ಯಾಲಯದ ಧ್ಯೇಯವಾಕ್ಯವೇ, ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆ ಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ವಿದ್ಯೆಯ ಸೃಷ್ಟಿ ಎನ್ನುವುದು ಕೇವಲ ವರ್ಗಕೋಣೆಗೆ ಸಂಬಂಧಿಸಿದ್ದಲ್ಲ. ಅದೊಂದು ಸಾಮೂಹಿಕ ಸ್ವರೂಪದ್ದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಕನ್ನಡ ವಿವಿ 33ನೇ ನುಡಿಹಬ್ಬದಲ್ಲಿ ಶುಕ್ರವಾರ ಮಾತನಾಡಿದ ಅವರು, ಕನ್ನಡಿಗರ ಕನಸನ್ನು ಕನಸುಗಾರ ಕವಿ, ನಾಟಕಕಾರ, ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರವರು ಕನ್ನಡ ವಿವಿ ಮೂಲಕ ನಾಡಿನ ಪ್ರಜ್ಞಾವಂತರ, ಸಂಸ್ಕೃತಿ ಚಿಂತಕರ, ಕಲಾವಂತರ, ಇತಿಹಾಸಕಾರರ, ಸಂಘಟಿತ ಚಿಂತನೆಗಳ ಮೂಲಕ ಸಾಕಾರಗೊಳಿಸಿದರು. ಕುಲಪತಿಗಳೆಲ್ಲರೂ ಕನ್ನಡದ ಈ ಸಸಿಗೆ ನೀರೆರೆದು ಹೆಮ್ಮರವಾಗುವಂತೆ ಬೆಳೆಸಿದ್ದಾರೆ. ಇಂದಿನ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿ ಯವರು ಈ ಕನ್ನಡ ಮರ ಇನ್ನಷ್ಟು ಹೂ ಹೀಚು ಬಿಟ್ಟು ಸಮೃದ್ಧವಾಗಿ ಬೆಳೆಯಲು ಬೇಕಾದ ಎಲ್ಲ ವ್ಯವಸ್ಥೆಗಳನ್ನು ಕಲ್ಪಿಸುತ್ತಿದ್ದಾರೆ.

ಕನ್ನಡದ್ದೇ ಆದ ಹೊಸ ದೃಷ್ಟಿಕೋನಗಳಿಂದ ಕನ್ನಡ ನಾಡು ನುಡಿಯ ಆಳ ಅಗಲಗಳನ್ನು ಅರ್ಥಮಾಡಿಕೊಳ್ಳಲು, ವಸಾಹತು ಚಿಂತನೆಗಳಿಗಿಂತ ಭಿನ್ನವಾದ ಅಧ್ಯಯನ ವಿಧಾನಗಳನ್ನು, ಆಲೋಚನಾ ಕ್ರಮಗಳನ್ನು ರೂಪಿಸಿಕೊಂಡ ಸಂಗತಿಗಳನ್ನು, ಇಲ್ಲಿನ ವಿಶಿಷ್ಟ ವಿನ್ಯಾಸದ ಕಟ್ಟಡಗಳಲ್ಲಿ, ಶೋಧನೆ, ಬೋಧನೆ ಹಾಗೂ ಪ್ರಕಟಣೆಗಳಲ್ಲಿ ನಿಚ್ಚಳವಾಗಿ ಕಾಣಬಹುದು. ಈ ಅರ್ಥದಲ್ಲಿ ಕನ್ನಡ ವಿಶ್ವವಿದ್ಯಾಲಯ ಮತ್ತು ಇಲ್ಲಿನ ವಿದ್ವಾಂಸರಿಗೆ ಮತ್ತು ಅವರ ವಿದ್ವತ್ತಿಗೆ ಕರ್ನಾಟಕದಲ್ಲಿ ವಿಶೇಷ ಗೌರವವಿದೆ. ಡಾ.ಚಂದ್ರಶೇಖರ ಕಂಬಾರರು "ಕನ್ನಡ ವಿಶ್ವವಿದ್ಯಾಲಯ ಕನ್ನಡಿಗರೆಲ್ಲರ ಕನಸು ಮತ್ತು ಜವಾಬ್ದಾರಿಗಳಿಂದ ಬೆಳೆಯಬೇಕು. ಕನ್ನಡ ವಿಶ್ವವಿದ್ಯಾಲಯ ಕೆಲವರು ಬರೆದು ಮುಗಿಸಬೇಕಾದ ಪುಸ್ತಕವಲ್ಲ, ಕನ್ನಡದ ಸಮಸ್ತರೈವ ಬರೆಯಬೇಕಾದ ಪುಸ್ತಕವಿದು" ಎಂದು ಹೇಳಿದ್ದು, ಶೈಕ್ಷಣಿಕ ವಲಯಗಳಾಚೆಯಿರುವ, ಉಪೇಕ್ಷಿತ ಗೊಂಡಿರುವ ಸಂಗತಿಗಳನ್ನು ಒಳಗೊಳ್ಳಲೇಬೇಕಾದ ಸಮಷ್ಠಿ ಪ್ರಜ್ಞೆಯನ್ನು ಈ ಧ್ಯೇಯವಾಕ್ಯ ಧ್ವನಿಸುತ್ತದೆ. ವಿಶ್ವವಿದ್ಯಾಲಯ ಕೇವಲ ಅಧಿಕಾರ ಕೇಂದ್ರವಾಗಬಾರದು, ಬದಲಾಗಿ ಅಧ್ಯಯನ ಕೇಂದ್ರವಾಗಿರಬೇಕು ಎನ್ನುವ ಸಮಷ್ಠಿ ಪ್ರಜ್ಞೆಯನ್ನು >> 3


ಶ್ರೀನಿಧಿ ವಿದ್ಯಾಸಂಸ್ಥೆ(ರಿ.)
ಶ್ರೀ ಶ್ರಾವಣಿ ಸ್ಪರ್ಧಾತ್ಮಕ ತರಬೇತಿ ಕೇಂದ್ರ
ಚಿಕ್ಕಜೋಗಿಹಳ್ಳಿ, ಕೂಡ್ಲಿಗಿ ತಾ. ವಿಜಯನಗರ ಜಿ.




ಕುಮಾರಿ ಸಿ. ಸಮಿಯ
R.No : 579011298
Marks : 92/100
State Rank : 154 District No.1
Mobile : 8310245765

ಅದ್ಭುತ ಸಾಧನೆ
ಶ್ರೀ ಶ್ರಾವಣಿ ಸ್ಪರ್ಧಾತ್ಮಕ ತರಬೇತಿ ಕೇಂದ್ರ ಚಿಕ್ಕಜೋಗಿಹಳ್ಳಿ ಯಲ್ಲಿ
2024-25 ನೇ ಸಾಲಿನ ವಿಜಯನಗರ ಜಿಲ್ಲೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ
ಪ್ರಥಮ ಸ್ಥಾನ ಪಡೆದು ನಮ್ಮ ತರಬೇತಿ ಕೇಂದ್ರಕ್ಕೆ ಹೆಮ್ಮೆ ತಂದ ವಿದ್ಯಾರ್ಥಿನಿ
ಕುಮಾರಿ ಸಿ. ಸಮಿಯ ಇವರಿಗೆ ಅಭಿನಂದನೆಗಳು.

★ ನಮ್ಮ ತರಬೇತಿ ಕೇಂದ್ರದ ಪ್ರಥಮ ವರ್ಷದಲ್ಲಿ ಕೇವಲ 12 ವಿದ್ಯಾರ್ಥಿಗಳ ಪ್ರವೇಶಾತಿ ಪಡೆದು 50% ಕ್ಕಿಂತ ಹೆಚ್ಚು ಫಲಿತಾಂಶದ ಸಾಧನೆ.
★ ನವೋದಯ ಪರೀಕ್ಷಾ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ.
★ 2025-26ನೇ ಸಾಲಿನ ನವೋದಯ|ಸೈನಿಕ|ಮೊರಾರ್ಜಿ| ಆದರ್ಶ ಇತ್ಯಾದಿ ಪರೀಕ್ಷೆಗಳಿಗೆ ತರಬೇತಿ

ವಸತಿ ಸಹಿತ ಮತ್ತು ವಸತಿ ರಹಿತವಾಗಿ ತರಬೇತಿ ನೀಡಲಾಗುವುದು.

ಬೇಸಿಗೆ ಶಿಬಿರ ಪ್ರಾರಂಭಿಸಲಾಗುವುದು
02-04-2025 ರಿಂದ
25-05-2025 ರವರೆಗೆ

ವಿಶೇಷತೆಗಳು
- ಬುನಾದಿ ಪರಿಕಲ್ಪನೆಗಳಿಗೆ ಸದಾ ಆದ್ಯತೆ & ಚಟುವಟಿಕೆಯಾಧಾರಿತ ಸ್ವ-ಕಲಿಕೆಗೆ ಪ್ರೋತ್ಸಾಹ.
- ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು
- ಮಕ್ಕಳಲ್ಲಿ ವಿಶ್ಲೇಷಣಾ ಸಾಮರ್ಥ್ಯಕ್ಕೆ ಸದಾ ಸ್ಪಂದನೆ.
- ಮಕ್ಕಳ ಮಾನಸಿಕ & ಬೌದ್ಧಿಕ ವಿಕಾಸಕ್ಕೆ ಚೆಸ್(ಚದುರಂಗ) ಆಟದ ಅಭ್ಯಾಸಕ್ರಮ.
- ನುರಿತ ಮತ್ತು ಅನುಭವಿ ಪರಿಣಿತ ಶಿಕ್ಷಕರುಗಳಿಂದ ಬೋಧನೆ.
- ಸ್ಪಷ್ಟ ಓದು ಮತ್ತು ಬರವಣಿಗೆ ಕೌಶಲ್ಯಕ್ಕೆ ಆದ್ಯತೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ
- ಅವಕ್ಯಾನುಸಾರ (MNEMONICS) ತಂತ್ರ, ರೂಪಿಸಿಕೊಂಡು ಯಶಸ್ವಿ ಕಲಿಕೆಗೆ ಉತ್ತೇಜನ

ಶ್ರೀ ಶ್ರಾವಣಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕಜೋಗಿಹಳ್ಳಿ

## ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ನಾಗರಿಕ ವಿಮಾನ ಯಾನ ಖಾತೆ ಸಚಿವ ಕಿಂಜರಾಪು ರಾಮಮೋಹನ ನಾಯ್ಡು ಭೇಟಿ



**ನವದೆಹಲಿ:** ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ರಾಜ್ಯ ಸರ್ಕಾರವು ದಿನಾಂಕ 6–10–2005 ರಂದು ಒಪ್ಪಂದ ಮಾಡಿಕೊಂಡಿದೆ. ಒಪ್ಪಂದದ ನಿಯಮ ಬಿ (2) (v) ಪ್ರಕಾರ ಕಾರ್ಯನಿಯೋಜಕರು ವಿಮಾನ ನಿಲ್ದಾಣದ ವಿಸ್ತರಣೆಗಾಗಿ ಅಗತ್ಯ ವಿರುವ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಯಾವುದೇ ಋಣಭಾರವಿಲ್ಲದೆ ನಿಯೋಜಿತರಿಗೆ ಉಚಿತವಾಗಿ ವರ್ಗಾಯಿಸಬೇಕು. ಅದರಂತೆ, ಅಗತ್ಯವಿರುವ ಭೂಮಿಯನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಉಚಿತವಾಗಿ ವರ್ಗಾಯಿಸಲಾಗಿದೆ. ಒಪ್ಪಂದದ ಷರತ್ತು ಬಿ 2 (VI) ಪ್ರಕಾರ, ನಿಯೋಜಿತರು ಮೈಸೂರು ವಿಮಾನ ನಿಲ್ದಾಣದ ಹೆಚ್ಚಿನ ಅಭಿವೃದ್ಧಿಯ ಬಂಡವಾಳ ವೆಚ್ಚ, ಮಾರ್ಪಾಡುಗಳು, ಬಲಪಡಿಸುವಿಕೆ ಮತ್ತು ಮೇಲ್ದರ್ಜೆಗೇರಿಸುವ ಎಲ್ಲಾ ವೆಚ್ಚಗಳನ್ನು ಭರಿಸಬೇಕು. ಅದರಂತೆ, ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆಗೆ ಅಗತ್ಯವಿರುವ ಬಂಡವಾಳ ಹಾಗೂ ಇನ್ನಿತರೆ ವೆಚ್ಚಗಳನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವೇ ಭರಿಸಬೇಕಿದೆ.

**ಮೈಸೂರು, ಕಲಬುರಗಿ, ವಿಜಯಪುರ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕುರಿತು ಚರ್ಚೆ ನಡೆಸಿ ಮನವಿ ಪತ್ರ ಸಲ್ಲಿಸಿದರು**

ಈ ಹಿನ್ನೆಲೆಯಲ್ಲಿ, ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ಅಗತ್ಯವಿರುವ 240 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರವು 319.14 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಭೂ ಸ್ವಾಧೀನ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ.

ನವೆಂಬರ್ 2024 ರಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತವು(ಸಿ.ಎನ್.ಎನ್.ಎಲ್) ವಿಮಾನ ನಿಲ್ದಾಣ ವಿಸ್ತರಣೆ ಪ್ರದೇಶದಲ್ಲಿ ಎರಡು ಕಂದಕಗಳ ಮತ್ತು 7 ಕಾಲುವೆಗಳ ಸ್ಥಳಾಂತರಕ್ಕೆ ವರದಿಯನ್ನು ಸಲ್ಲಿಸಿದ್ದು, ಇದಕ್ಕೆ 70 ಕೋಟಿಗಳ ವೆಚ್ಚವಾಗಲಿದೆ. ಅಂತೆಯೇ, ಕೆ. ಪಿ.ಟಿ.ಸಿಎಲ್ ಕೂಡ ಹೈ–ಟೆನ್ಷನ್ ಲೈನ್ ಗಳ ಮತ್ತು ಚೆಸ್ಕಾಂ ಲೋ ಟೆನ್ಶನ್ ವೈರ್ ಗಳ ಮಾರ್ಗ ಬದಲಾವಣೆಗೆ 31.82 ಕೋಟಿಗಳ ಅಂದಾಜು ವೆಚ್ಚವಾಗಲಿದೆ ಎಂದು ತಿಳಿಸಿದ್ದು, ಒಟ್ಟಾರೆ ಸದರಿ ಕಾಮಗಾರಿಗೆ 101.82 ಕೋಟಿಗಳ ಅನುದಾನದ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಆದ್ದರಿಂದ, ರಾಜ್ಯ ಸರ್ಕಾರವು ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ 240 ಎಕರೆ ಭೂ ಸ್ವಾಧೀನಕ್ಕೆ ತಗಲುವ 319.14 ಕೋಟಿಗಳ ಭೂ ಸ್ವಾಧೀನದ ವೆಚ್ಚವನ್ನು ಭರಿಸಿದ್ದು, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು ವಿಸ್ತರಣೆಯ ಅಂದಾಜು ವೆಚ್ಚ 101.84 ಕೋಟಿಗಳ ಯುಟಿಲಿಟಿ ಸ್ಥಳಾಂತರದ ಯೋಜನೆಯನ್ನು ರೂಪಿಸಿ ಶ್ರೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕೆಂದು ಪತ್ರದಲ್ಲಿ ಕೋರಿದೆ.

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನ ಪತ್ರಿಕೆ ಇರಲಿ.**
ಡಿ..ವಿ.ಜಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮೊಬೈಲ್ ಹೊತ್ತು ತಂದೀತೇ ಮಲ್ಲಿಗೆಯ ಪರಿಮಳ!

# ವಾಸನೆಯ ರವಾನೆಗೊಂದು ಡಿಜಿಟಲ್ ಹೆಜ್ಜೆ

ಅಮ್ಮನ ಪ್ರೀತಿಯ ಹಸಿರು ಸಾಮ್ರಾಜ್ಯ ನಮ್ಮ ಮನೆಯ ಹಿತ್ತಲು. ಅಲ್ಲಿ ಸುಗಂಧದ ಸಂಭ್ರಮವೇ ಇತ್ತು .ನಿಂಬೆ ಗಿಡದ ತುಂಬಾ ಕಾಯಿಗಳು ತೂಗುತ್ತಿದ್ದವು. ಮಾವಿನ ಮರದಲ್ಲಿ ಹೂಗಳು ಕಾಯಿಗಳಾಗುತ್ತಿದ್ದವು. ಬಗೆಬಗೆಯ ಹೂಗಿಡಗಳು, ಸೇವಂತಿಗೆ, ದಾಸವಾಳ, ಕನಕಾಂಬರ, ಡೇರೆ, ಗುಲಾಬಿ..,ಅರಳಿ ನಿಂತ ಹೂಗಳ ನೋಟ ಕಣ್ಣಿಗೆ ಹಬ್ಬವಾಗಿತ್ತು. ಬಹಳ ದಿನಗಳ ನಂತರ ಜೇನುನೊಣಗಳ ಝೇಂಕಾರ ಕೇಳಿ ಖುಷಿಯಾಯಿತು.


ಅಲ್ಲಿ ನನ್ನ ಇಷ್ಟದ ದುಂಡು ಮಲ್ಲಿಗೆಯ ಹೂವುಗಳು ಅರಳಿದ್ದವು. ಹಚ್ಚ ಹಸಿರು ಗಿಡದಲ್ಲಿ ಹಿಮ ಸುರಿದಂತೆ ಮಲ್ಲಿಗೆ, ಮನಮೋಹಕ ದೃಶ್ಯ! ನಾನು ಕೆಲವು ಹೂವುಗಳ ಚಿತ್ರಗಳನ್ನು ತೆಗೆದೆ, ಬಹು ಸುಂದರ ಛಾಯಾಚಿತ್ರಗಳು ನನ್ನ ಮೊಬೈಲಿನಲ್ಲಿ ಸೆರೆಯಾದವು. ಅವುಗಳನ್ನು ನನ್ನ ಸೋಶಿಯಲ್ ಮೀಡಿಯಾ ಸ್ಟೇಟಸ್‌ಗೆ ಅಪ್ಲೋಡ್ ಮಾಡಿದೆ. ಆಗ ಒಂದು ಯೋಚನೆ ಹೊಳೆಯಿತು. ಆ ಹೂವುಗಳ ಚಿತ್ರವನ್ನು ಮಾತ್ರವಲ್ಲ, ಅವುಗಳ ಪರಿಮಳವನ್ನೂ ಸೆರೆಹಿಡಿಯುವುದಾದರೆ ಅದೆಷ್ಟು ಚೆನ್ನಾಗಿರುತ್ತಿತ್ತು, ಅಲ್ಲವೇ?

ಇಲ್ಲಿ ನಾನು ಸುಗಂಧ ದ್ರವ್ಯವನ್ನು ಬಾಟಲಿಯಲ್ಲಿ ಸಂಗ್ರಹಿಸುವ ಬಗ್ಗೆ ಮಾತನಾಡುತ್ತಿಲ್ಲ, ಅದು ಬೇರೆ ಕತೆ! ಬದಲಿಗೆ, ಆ ಪರಿಮಳವನ್ನು ಮೊಬೈಲ್ ಮೂಲಕ ಒಂದು 'ಅಟ್ಯಾಚ್‌ಮೆಂಟ್' ಆಗಿ ಕಳುಹಿಸಬಹುದಾದ ತಂತ್ರಜ್ಞಾನ!. ಯೋಚಿಸಿ ನೋಡಿ, ವಾಟ್ಸಾಪ್‌ನಲ್ಲಿ ಆಡಿಯೊ ಅಥವಾ ವಿಡಿಯೊ ಕ್ಲಿಪ್ ಕಳುಹಿಸುವಂತೆಯೇ, ಈ ಮಲ್ಲಿಗೆಯ ಸುಗಂಧವನ್ನು ಫ್ರೆಂಡ್ಸ್‌ಗೆ ಶೇರ್ ಮಾಡಿದರೆ? ಆಗ ಸುಂದರ ಚಿತ್ರದ ಜೊತೆಗೆ ಆ ಸುಗಂಧವೂ ಅವರಿರುವಲ್ಲಿಗೇ ತಲುಪಿ ಅವರ ಮನಸಿಗೆ ಮುದ ನೀಡುತ್ತಿತ್ತು ಅಲ್ಲವೇ!

ತಂತ್ರಜ್ಞಾನವು ಈಗಾಗಲೇ ನಮ್ಮ ಜೀವನವನ್ನು ಅಮೂಲಾಗ್ರವಾಗಿ ಬದಲಾಯಿಸಿದೆ. ಶಬ್ದವನ್ನು ಆಲಿಸುವುದು, ಚಿತ್ರಗಳನ್ನು ವೀಕ್ಷಿಸುವುದು. ಇವೆಲ್ಲವೂ ಈಗ ಒಂದು ಬಟನ್ ಒತ್ತುವಷ್ಟರಲ್ಲಿ ಸಾಧ್ಯ. ದೂರದ ಸ್ನೇಹಿತರೊಂದಿಗೆ ಮಾತನಾಡುವುದು, ಚಲನಚಿತ್ರಗಳನ್ನು ಸ್ಟ್ರೀಮ್ ಮಾಡುವುದು, ವಿಡಿಯೋ ಕಾಲ್‌ಗಳಲ್ಲಿ ಮುಖಗಳನ್ನು ನೋಡುವುದು. ಇವೆಲ್ಲ ಈಗ ನಮ್ಮ ದೈನಂದಿನ ಜೀವನದ ಅಂಗವಾಗಿವೆ. ತಂತ್ರಜ್ಞಾನದ ಈ ಮಾಯಾಜಾಲ ಹೊಸ ಯುಗದ ಸೃಷ್ಟಿ! ಆದರೂ, ಒಂದು ಇಂದ್ರಿಯ ಇನ್ನೂ ಡಿಜಿಟಲ್ ಜಗತ್ತಿಗೆ ಸಿಗದೇ ಉಳಿದಿದೆ: ವಾಸನೆ! ಇದೀಗ, ವಾಸನೆಯನ್ನು ಡಿಜಿಟಲ್ ರೂಪದಲ್ಲಿ ಗ್ರಹಿಸುವ ಮತ್ತು ಸ್ಥಳದಿಂದ ಸ್ಥಳಕ್ಕೆ ಪ್ರಸಾರ ಮಾಡುವ ತಂತ್ರಜ್ಞಾನವು ಭವಿಷ್ಯದ ಮುಂದಿನ ದೊಡ್ಡ ಹೆಜ್ಜೆಯಾಗಿ ರೂಪುಗೊಳ್ಳುತ್ತಿದೆ.

**ವಾಸನೆಯನ ಡಿಜಿಟಲ್ ರವಾನೆ:**


ವಾಸನೆಯು ಒಂದು ರಾಸಾಯನಿಕ ಪ್ರಕ್ರಿಯೆಯಾಗಿದೆ. ನಾವು ಗಾಳಿಯಲ್ಲಿ ಹರಡಿರುವ ಸೂಕ್ಷ್ಮ ಕಣಗಳನ್ನು ಗ್ರಹಿಸುವ ಮೂಲಕ ವಾಸನೆಯನ್ನು ಅನುಭವಿಸುತ್ತೇವೆ. ಈ ಕಣಗಳು ನಮ್ಮ ಮೂಗಿನ ಒಳಗಿನ ಸಂವೇದಕಗಳನ್ನು ತಲುಪಿ, ಮೆದುಳಿಗೆ ಸಂದೇಶ ಕಳುಹಿಸುತ್ತವೆ. ಈ ಪ್ರಕ್ರಿಯೆಯನ್ನು ಡಿಜಿಟಲ್ ಆಗಿ ಅನುಕರಿಸಲು, ಸಂಶೋಧಕರು ಎರಡು ಪ್ರಮುಖ ಹಂತಗಳ ಮೇಲೆ ಕೆಲಸ ಮಾಡುತ್ತಿದ್ದಾರೆ: ಮೊದಲನೆಯದಾಗಿ, ವಾಸನೆಯನ್ನು 'ಕ್ಯಾಪ್ಚರ್' ಮಾಡುವುದು ಮತ್ತು ಅದನ್ನು ಡಿಜಿಟಲ್ ಸಂಕೇತವಾಗಿ ಪರಿವರ್ತಿಸುವುದು; ಎರಡನೆಯದಾಗಿ, ಆ ಸಂಕೇತವನ್ನು ದೂರದಲ್ಲಿ ಮತ್ತೆ ವಾಸನೆಯಾಗಿ ಪುನಸ್ಸೃಷ್ಟಿಸುವುದು.



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful HAMPI TIMES E-paper

ಪ್ರಸ್ತುತ, ವಿಜ್ಞಾನಿಗಳು 'ವಾಸನೆ ಸಂವೇದಕಗಳು' ಎಂಬ ಸಾಧನಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಈ ಸಂವೇದಕಗಳು ಗಾಳಿಯಲ್ಲಿರುವ ರಾಸಾಯನಿಕ ಸಂಯುಕ್ತಗಳನ್ನು ವಿಶ್ಲೇಷಿಸಿ, ಅವುಗಳ ಮಾದರಿಯನ್ನು ಡಿಜಿಟಲ್ ಡೇಟಾ ಆಗಿ ರೂಪಾಂತರಿಸುತ್ತವೆ. ಉದಾಹರಣೆಗೆ, ಹೂವಿನ ಸುವಾಸನೆಯನ್ನು ಒಂದು ಸಂಖ್ಯಾತ್ಮಕ ಕೋಡ್‌ಗೆ ಪರಿವರ್ತಿಸಬಹುದು. ನಂತರ, ಈ ಡೇಟಾವನ್ನು ಇಂಟರ್ನೆಟ್ ಮೂಲಕ ಕಳುಹಿಸಿ, ವಾಸನೆಯನ್ನು ಪುನರ್‌ನಿರ್ಮಿಸುವ ಸಾಧನದಲ್ಲಿ ಮತ್ತೆ ಆ ವಾಸನೆಯನ್ನು ಉತ್ಪಾದಿಸಬಹುದು. ಈ ರೀತಿಯ ಸಾಧನಗಳು ಸಣ್ಣ ಪರಿಮಾಣದ ರಾಸಾಯನಿಕಗಳನ್ನು ಬಿಡುಗಡೆ ಮಾಡುವ ಮೂಲಕ ಅಥವಾ ಗಾಳಿಯನ್ನು ನಿರ್ದಿಷ್ಟ ರೀತಿಯಲ್ಲಿ ಮಾರ್ಪಡಿಸುವ ಮೂಲಕ ವಾಸನೆಯನ್ನು ಸೃಷ್ಟಿಸುತ್ತವೆ.



ಈ ತಂತ್ರಜ್ಞಾನದ ಸಾಧ್ಯತೆಗಳು, ವಾಸನೆಯನ್ನು ಡಿಜಿಟಲ್ ಆಗಿ ರವಾನಿಸುವ ತಂತ್ರಜ್ಞಾನವು ಹಲವು ಕ್ಷೇತ್ರಗಳಲ್ಲಿ ದೊಡ್ಡ ಬದಲಾವಣೆ ತರಬಹುದು:

* **ಮನರಂಜನೆ:** ಚಲನಚಿತ್ರಗಳು ಮತ್ತು ವೀಡಿಯೊ ಗೇಮ್‌ಗಳಲ್ಲಿ ವಾಸನೆಯನ್ನು ಸೇರಿಸಿದರೆ, ಅನುಭವವು ಇನ್ನಷ್ಟು ರೋಮಾಂಚಕವಾಗುತ್ತದೆ. ಉದಾಹರಣೆಗೆ, ಒಂದು ಕಾಡಿನ ದೃಶ್ಯದಲ್ಲಿ ಮಳೆಯ ಮಣ್ಣಿನ ವಾಸನೆಯನ್ನು ಅನುಭವಿಸಬಹುದು ಅಥವಾ ಬೇಕರಿಯ ದೃಶ್ಯದಲ್ಲಿ ತಾಜಾ ಬ್ರೆಡ್‌ನ ಸುವಾಸನೆಯನ್ನು ಗ್ರಹಿಸಬಹುದು.

* **ಆರೋಗ್ಯ:** ಈ ತಂತ್ರಜ್ಞಾನವನ್ನು ಚಿಕಿತ್ಸೆಯಲ್ಲಿ ಬಳಸಿ, ಒತ್ತಡವನ್ನು ಕಡಿಮೆ ಮಾಡಲು ಲ್ಯಾವೆಂಡರ್ ನಂತಹ ಶಾಂತಗೊಳಿಸುವ ಸುಗಂಧವನ್ನು ರೋಗಿಗಳಿಗೆ ಒದಗಿಸಬಹುದು.

* **ವ್ಯಾಪಾರ:** ಆನ್‌ಲೈನ್ ಶಾಪಿಂಗ್‌ನಲ್ಲಿ ಗ್ರಾಹಕರು ಉತ್ಪನ್ನದ ವಾಸನೆಯನ್ನು ಪರೀಕ್ಷಿಸಬಹುದು. ಉದಾಹರಣೆಗೆ, ಸುಗಂಧ ದ್ರವ್ಯ ಅಥವಾ ಆಹಾರದ ವಾಸನೆಯನ್ನು ಮನೆಯಿಂದಲೇ ಪರಿಶೀಲಿಸಬಹುದು!.

* **ಶಿಕ್ಷಣ:** ವಿದ್ಯಾರ್ಥಿಗಳಿಗೆ ರಸಾಯನಶಾಸ್ತ್ರ ಅಥವಾ ಜೀವಶಾಸ್ತ್ರದ ಪಾಠಗಳಲ್ಲಿ ವಿವಿಧ ವಾಸನೆಗಳನ್ನು ಅನುಭವಿಸುವ ಅವಕಾಶವಿದ್ದರೆ, ಕಲಿಕೆಯು ಇನ್ನಷ್ಟು ಪರಿಣಾಮಕಾರಿಯಾಗುತ್ತದೆ.

* **ಆಹಾರ ಉದ್ಯಮ:** ರೆಸ್ಟೋರೆಂಟ್‌ಗಳು ತಮ್ಮ ಖಾದ್ಯಗಳ ವಾಸನೆಯನ್ನು ಗ್ರಾಹಕರಿಗೆ ಡಿಜಿಟಲ್ ಆಗಿ ಕಳುಹಿಸಬಹುದು. ಉದಾಹರಣೆಗೆ, ಒಂದು ಪಿಜ್ಜಾ ಕಂಪನಿಯು ತಾಜಾ ಪಿಜ್ಜಾದ ಸುಗಂಧವನ್ನು ಕಳಿಸುವ ಮೂಲಕ ಗ್ರಾಹಕರನ್ನು ಆಕರ್ಷಿಸಬಹುದು.

**ಸವಾಲುಗಳು :** ಈ ತಂತ್ರಜ್ಞಾನವು ಇನ್ನೂ ಆರಂಭಿಕ ಹಂತದಲ್ಲಿದೆ ಮತ್ತು ಹಲವು ಸವಾಲುಗಳನ್ನು ಎದುರಿಸುತ್ತಿದೆ. ಒಂದು ದೊಡ್ಡ ಸಮಸ್ಯೆಯೆಂದರೆ, ವಾಸನೆಯು ತುಂಬಾ ಸಂಕೀರ್ಣವಾಗಿದೆ. ಶಬ್ದ ಅಥವಾ ಚಿತ್ರಗಳಂತೆ ಸರಳವಾಗಿ ಒಂದು ಸಂಕೇತಕ್ಕೆ ಸೀಮಿತಗೊಳಿಸುವುದು ಕಷ್ಟ. ಪ್ರತಿ ವಾಸನೆಯು ಸಾವಿರಾರು ರಾಸಾಯನಿಕ ಸಂಯುಕ್ತಗಳ ಸಂಯೋಜನೆಯಾಗಿರುತ್ತದೆ, ಮತ್ತು ಇವೆಲ್ಲವನ್ನೂ ನಿಖರವಾಗಿ ಪುನರ್‌ನಿರ್ಮಿಸುವುದು ಸವಾಲಿನ ಕೆಲಸ. ಜೊತೆಗೆ, ಈ ಸಾಧನಗಳನ್ನು ಚಿಕ್ಕದಾಗಿ ಮತ್ತು ಕೈಗೆಟಕುವ ದರದಲ್ಲಿ ತಯಾರಿಸುವುದು ಮತ್ತೊಂದು ತೊಡಕು. ಇದರ ಜೊತೆಗೆ, ಸುರಕ್ಷತೆಯ ಪ್ರಶ್ನೆಯೂ ಇದೆ. ರಾಸಾಯನಿಕಗಳನ್ನು ಬಿಡುಗಡೆ ಮಾಡುವ ಸಾಧನಗಳು ಆರೋಗ್ಯಕ್ಕೆ ಹಾನಿಕಾರಕವಾಗದಂತೆ ಖಚಿತಪಡಿಸಬೇಕು. ಜನರು ಈ ತಂತ್ರಜ್ಞಾನವನ್ನು ಒಪ್ಪಿಕೊಳ್ಳಲು ಸಿದ್ಧರಿರುವುದು ಕೂಡ ಮುಖ್ಯವಾಗಿದೆ.

**ಭವಿಷ್ಯದ ದೃಷ್ಟಿಕೋನ:** ವಾಸನೆಯನ್ನು ಡಿಜಿಟಲ್ ಆಗಿ ಪ್ರಸಾರ ಮಾಡುವ ತಂತ್ರಜ್ಞಾನವು ಇನ್ನೂ ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಬಂದಿಲ್ಲವಾದರೂ, ಸಂಶೋಧನೆಗಳು ವೇಗವಾಗಿ ಮುಂದುವರಿಯುತ್ತಿವೆ. ಜಪಾನ್‌ನಂತಹ ದೇಶಗಳಲ್ಲಿ ಈಗಾಗಲೇ 'ಸೆಂಟ್ ರೆಕಾರ್ಡರ್' ಮತ್ತು 'ಸೆಂಟ್ ಪ್ಲೇಯರ್' ಎಂಬ ಸಾಧನಗಳ ಮಾದರಿಗಳನ್ನು ಪ್ರದರ್ಶಿಸಲಾಗಿದೆ. ಭವಿಷ್ಯದಲ್ಲಿ, ನಮ್ಮ ಸ್ಮಾರ್ಟ್‌ಫೋನ್‌ಗಳು ಅಥವಾ ಕಂಪ್ಯೂಟರ್‌ಗಳು ವಾಸನೆಯನ್ನು ಕಳುಹಿಸುವ ಮತ್ತು ಸ್ವೀಕರಿಸುವ ಸಾಮರ್ಥ್ಯವನ್ನು ಹೊಂದಬಹುದು. ಈ ತಂತ್ರಜ್ಞಾನವನ್ನು ವರ್ಚುವಲ್ ರಿಯಾಲಿಟಿಯೊಂದಿಗೆ ಸಂಯೋಜಿಸುವ ಮೂಲಕ, ತೀವ್ರವಾದ ಅನುಭವಗಳನ್ನು ಸೃಷ್ಟಿಸುವುದು ಸಾಧ್ಯವಿದೆ. ಈ ತಂತ್ರಜ್ಞಾನವು ನಮ್ಮ ಐದು ಇಂದ್ರಿಯಗಳನ್ನು ಡಿಜಿಟಲ್ ಜಗತ್ತಿನೊಂದಿಗೆ ಸಂಪೂರ್ಣವಾಗಿ ಸಂಯೋಜಿಸುವ ದಿನವನ್ನು ತರುತ್ತದೆ. ನೀವು ದೂರದಲ್ಲಿರುವ ಗೆಳೆಯನಿಗೆ ತಾಜಾ ಕಾಫಿಯ ವಾಸನೆಯನ್ನು ಅಥವಾ ಗೆಳತಿಗೆ ಮಲ್ಲಿಗೆ ಹೂವಿನ ಪರಿಮಳವನ್ನು ಮೊಬೈಲ್‌ನಲ್ಲಿ ಮೆಸೇಜ್ ಮಾಡಬಹುದು! ಆ ದಿನ ಹತ್ತಿರವಾಗುತ್ತಿದೆ!

# ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕಸ್ಪರ್ಧೆ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮಗಳನ್ನು ಏ.05 ಮತ್ತು 06 ರಂದು ನಗರದ ಜಿಲ್ಲಾ ಕ್ರೀಡಾಂಗಣ ಮೈದಾನದಲ್ಲಿ ಆಯೋಜಿಸಲಾಗಿದೆ.

ಏ.05 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಸಂಸದರಾದ ಈ.ತುಕಾರಾಂ ಅವರು ಕ್ರೀಡಾ ಧ್ವಜರೋಹಣ ನೆರವೇರಿಸುವರು.

ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್ ಅವರು ಕ್ರೀಡಾ ಜ್ಯೋತಿ ಸ್ವೀಕಾರ ಮಾಡುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಪ್ರತಿಜ್ಞಾ ವಿಧಿ ಭೋದಿಸುವರು.

ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಾದ ಎಂ.ಎ.ಆಸೀಫ್ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು.

ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯಸಭೆ ಸಂಸದರಾದ ಡಾ.ಸೈಯದ್ ನಾಸೀರ್ ಹುಸೇನ್, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಾಸಕರಾದ ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್ ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್, ಬಳ್ಳಾರಿ ವೃತ್ತದ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರಾದ ಅಮೀನ್ ಮುಕ್ತಾರ್ ಅಹ್ಮದ್, ಜಿಲ್ಲಾ ಹೆಚ್ಚುವರಿ ಪೋಲಿಸ್ ಅಧೀಕ್ಷಕರಾದ ಕೆ.ಪಿ.ರವಿಕುಮಾರ್, ಎಸ್.ನವೀನ್ ಕುಮಾರ್, ಸಹಾಯಕ ಆಯುಕ್ತ ಪಿ.ಪ್ರಮೋದ್, ಅಬಕಾರಿ ಉಪ ಆಯುಕ್ತ ಮಂಜುನಾಥ.ಎನ್., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ಸೇರಿದಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಮಟ್ಟದ ಪದಾಧಿಕಾರಿಗಳು, ವಿವಿಧ ತಾಲ್ಲೂಕುಗಳ ಅಧ್ಯಕ್ಷರು, ಜಿಲ್ಲೆಯ ಎಲ್ಲಾ ಶಾಖೆಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಎಲ್ಲಾ ಇಲಾಖೆಯ ವೃಂದ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಜಿಲ್ಲೆಯ ಅಧಿಕಾರಿಗಳು, ನೌಕರರ ಬಾಂಧವರು ಹಾಗೂ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಇಪಿಎಫ್‌ಓ: ಏ.15 ಪಿಂಚಣಿ ಅದಾಲತ್

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಏ.15 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ. ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಒ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಏ.11 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಕನ್ನಡ ವಿಶ್ವವಿದ್ಯಾಲಯ 33ನೇ ಘಟಿಕೋತ್ಸವ ನುಡಿಹಬ್ಬ ದೇಸಿ ಪರಂಪರೆಯ ಪ್ರತಿಬಿಂಬ





## ಕವಿ ಮನಸು

### ಸಮಾದಿಯೊಳಿರುವುದೇನೋ ಸಮಸಮಾಜ ?

ಹಾಡೋ ಪಾಡೋ
ಕಟ್ಟುಪಾಡುಗಳ ಬೇಲಿಯ ದಾಟಿ
ಜಾತಿ ಧರ್ಮಗಳ ಸಂಕೋಲೆಯ ಮೀಟಿ
ಪರದೆಯ ಹೊರಜಗವ ನೋಡಲು
ಮುಂದಾಗಿ

ನಾವು ದಾಸಿಯರಲ್ಲ
ನಾವು ನಿಮ್ಮ ದಾಹತೀರಿಸುವವರೂ ಅಲ್ಲ
ನಮಗು ಜೀವವಿದೆ ಬೀವನಕ್ಕೆ ಒಂದು
ಗುರಿಯಿದೆ

ನಮ್ಮಿಂದ ಬಂದ ನೀವು ನಮ್ಮನ್ನೇ
ಕಡೆಗಣಿಸುವಿರೇಕೆ
ನಾವಿಲ್ಲದಿದ್ದರೆ ನಡೆದೀತಾ ನಿಮ್ಮ
ಕಾರ್ಯವೈಖರಿ
ಆದರೂ ನಮ್ಮನು ಹೀಯಾಳಿಸುವಿರಿ
ನೀನ್ಯಾರು ಎಂದು?

ಹುಟ್ಟಿನಲ್ಲೆ ಚಿಮುಟ ಹಾಕುವಿರಿ
ಮುಟ್ಟಿನ ಬಗ್ಗೆ ಅಸಹ್ಯ ಪಡುವಿರಿ
ಕೊನೆಗೆ ವ್ಯಾರ್ಥರಂತೆ ವ್ಯವಹರಿಸುವಿರಿ

ಮನೆಯಲ್ಲಿ ಕೊಟ್ಟದ್ದು ಸಾಲದೆಂದು
ಖೋಟಗಳಿಗೆ ಹೋಗುವಿರಿ
ಹೊಟ್ಟೆಪಾಡಿಗೆ ಮೈಮಾರಿಕೊಳ್ಳುವವರನ್ನು
ಬಕ್ಷಿಸಲಾರಿರಿ

ನಾನು ಶೋಷಿತೆ ಎಂದು ಹೇಳಲಾಗದೆ
ನಾನು ವೇಶೆ ನನಗೆ ಮನಸ್ಸಿಗೆ ಎಂದು ಧ್ವನಿ
ಎತ್ತಲಾಗದೆ
ಅಸ್ಮಿತೆಯ ಮರೆತು ಜೀವನವ
ಅರಿಯುತ್ತಿದ್ದಾಳೆ

ಧ್ವನಿ ಎತ್ತುವ ಮುನ್ನ ಬಾಯಿ ಮುಚ್ಚಿಸುವಿರಿ
ಜಗವ ನೋಡುವ ಮುನ್ನ ಕಣ್ಣೇ
ಮುಚ್ಚಿಸಿಬಿಡುವಿರಿ
ಸಮಾದಿಯೊಳಿರುವುದೇನೋ?
ನಾವಿಚ್ಚುಸುವ ಸಮಸಮಾಜ

– ಮುಬೀನಾ ಪಿಂಜಾರ್ ಹೊಸಪೇಟೆ

### ಸಂಚಲನ

ಸುಗಮಕಾರರಂತರಾಳ
ವಿನೂತನವೀ ಸಂಚಲನ
ಕಲಿಕೆ ಕಲಿಸುವಿಕೆಯ ಸಮ್ಮಿಲನ
ವಿಷಯ ವಿನಿಮಯದ ಪುನರ್ಬಲನ
ಜ್ಞಾನಾಂತರಾಳದ ಪುನರ್ಮನನ.

ಸಂಚಲನ ಮಾತ್ರವಲ್ಲವಿದು
ನವನವೀನ ಕಲಿಕೆಯ ಸಿಂಚನ
ವಿಚಾರ ಹಂಚುವಿಕೆಗಿದುವೇ ಪ್ರೇರಣ
ಸ್ವಯಂ ಅಭಿವ್ಯಕ್ತತೆಯ ಸುಲಭ ಸಾಧನ.

ಇಲ್ಲಿಹುದು ಚಟುವಟಿಕೆಗಳ ಹೂರಣ
ಸಂತಸದಾಯಕ ಕಲಿಸುವಿಕೆಗಿದುವೇ
ಪ್ರೇರಣ
ಅಗಣಿತ, ಅನಂತ, ಅಪರಿಮಿತ ಸಂಹಿತೆ
ವಿಷಯ ಮಂಡನೆಗಳಲ್ಲಿ ಶಿಕ್ಷಕರ ತಲ್ಲೀನತೆ.

ಗೊತ್ತಿದ್ದು ಗೊತ್ತಿಲ್ಲದಂತಿರುವರು ಕೆಲವರು
ನಮ್ಮದಲ್ಲವೆಂಬ ಭಾವದಲ್ಲಿ ನಿಸ್ಸಿಮರು
ಹಲವರು
ಎಲ್ಲರ ಮನದಾಳದಿ ವಿಷಯ
ಪಸರಿಸುವವರೇ
ನಮ್ಮ ನಿಮ್ಮೆಲ್ಲರ ಹೆಮ್ಮೆಯ
ಸುಗಮಗಾರರು.

ತಿಳಿಯೋಣ ತಿಳಿಸೋಣ
ಕಲಿಯೋಣ ಕಲಿಸೋಣ
ತಿಳಿದು ತಿಳಿಸಿ ಕಲಿತು ಕಲಿಸಿ
ಜ್ಞಾನ ಜ್ಯೋತಿಯ ಬೆಳಗಿಸೋಣ.

ಸುಗಮಕಾರರೆಲ್ಲರಿಗೆ ಅರ್ಪಣೆ
ಈ ನನ್ನ ಅಕ್ಷರ ನುಡಿ ನಮನ
ಸುಗಮಕಾರರೇ ನಿಮಗಿದೋ
ನನ್ನ ನಮನ ಅರ್ಪಿತವೀ ನುಡಿನಮನ

ಸಿಂಧು ಗುಬ್ಬಿ, ಶಿಕ್ಷಕಿ

### ಶಿಲ್ಪ ಕಲೆ

ಬೇಲೂರಿನ ಶಿಲ್ಪಕಲೆಯ ಸೌಂದರ್ಯ
ಸೆಳೆವುದು ಎಲ್ಲರ ಹೃದಯದ ಆಂತರ್ಯ
ಕಲೆಯ ಸೆಲೆಯನ್ನು ನೋಡುವುದೇ
ಸೌಭಾಗ್ಯ
ಸಂಸ್ಕೃತಿಯೊಂದಿಗೆ ಇರುವುದು ಬಿಡಿಸದ
ಬಾಂಧವ್ಯ

ಶಿಲೆಯಲಿ ಕಲೆಯನ್ನು ಕೊರೆದಿಹರು
ಸೌಂದರ್ಯದ ಬಲೆಯನೇ ಹೆಣೆದಿಹರು
ಕೆತ್ತನೆಯಲೇ ಜೀವ ತುಂಬಿಹರು
ಕರುನಾಡಿಗೆ ಹೆಮ್ಮೆಯ ಹೊಯ್ಸಳರು

~ ಚೇತನ ಭಾರ್ಗವ, ಬೆಂಗಳೂರು

## ಕನ್ನಡ ವಿವಿ ಉದ್ದೇಶ ಕಲಿಸುವುದಲ್ಲ ಕಲಿಕೆಗೆ ಅವಕಾಶ ನೀಡುವುದು

ಮೊದಲ ಪುಟದಿಂದ

ಇಲ್ಲಿ ಕಾಣುತ್ತೇವೆ. ಪದವಿ ಅಥವಾ ಶಿಕ್ಷಣ ನೀಡುವುದೇ ಕನ್ನಡ ವಿಶ್ವವಿದ್ಯಾಲಯ ಪರಮಗುರಿ ಅಲ್ಲ, ಕನ್ನಡ ಭಾಷೆಯ ಸರ್ವತೋಮುಖ ಏಳಿಗೆಯನ್ನು ಸಾಧಿಸುವುದು ವಿಶ್ವವಿದ್ಯಾಲಯದ ಮುಖ್ಯ ಉದ್ದೇಶ. ಈ ಗುರಿ ಸಾಧನೆಗಾಗಿ ಸಂಶೋಧನಾಂಗ, ಪ್ರಸಾರಾಂಗ, ಆಡಳಿತಾಂಗ ಎಂಬ ಸಂರಚನೆಯನ್ನು ಮಾಡಿಕೊಂಡು ಹಲವು ಎತ್ತರಗಳನ್ನು ವಿಶ್ವವಿದ್ಯಾಲಯ ಏರಿದೆ.



ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಇತಿಹಾಸದ ಅಧ್ಯಯನ ವೆಂದರೆ, ಇಲ್ಲಿ ವಾಸಿಸುವ ಮನುಷ್ಯರ ಅಧ್ಯಯನವೇ ಆಗಿದೆ. ಇತಿಹಾಸ, ಸಮಾಜ ಶಾಸ್ತ್ರ, ಮಾನವಶಾಸ್ತ್ರ, ಜಾನಪದ, ಬುಡಕಟ್ಟು, ಲಲಿತಕಲೆಗಳು, ವಿಜ್ಞಾನಗಳ ಅಧ್ಯಯನಕ್ಕೂ ಭಾಷೆಗೂ ಕರುಳಬಳ್ಳಿ ಸಂಬಂಧವಿದೆ. ಕನ್ನಡ ಭಾಷೆ, ಕಲೆ, ಸಂಸ್ಕೃತಿ, ಇತಿಹಾಸದ ಅಧ್ಯಯನವೆಂದರೆ, ಕನ್ನಡ ಜನತೆಯ ನೈತಿಕಮೌಲ್ಯಗಳ, ಆಧ್ಯಾತ್ಮಿಕ ಆಕಾಂಕ್ಷೆಗಳ, ಧಾರ್ಮಿಕ ಅಪೇಕ್ಷೆಗಳ, ಇನ್ನು ದಾಖಲಾಗದೆ ಉಳಿದ ಕನ್ನಡ ಮನುಷ್ಯರ ಚರಿತ್ರೆ ಇವೆಲ್ಲವುಗಳ ಪ್ರತಿಫಲವೇ ಆಗಿದೆ. ಉನ್ನತ ಶಿಕ್ಷಣಕ್ಷೇತ್ರದಲ್ಲಿ ಅದರಲ್ಲಿಯೂ ಸಂಶೋಧನಾ ಕ್ಷೇತ್ರಕ್ಕೆ ಕನ್ನಡ ವಿಶ್ವವಿದ್ಯಾಲಯ ಕೊಡುಗೆ ವಿಶಿಷ್ಟ ಹಾಗೂ ವಿಭಿನ್ನವಾಗಿವೆ.

ಅಮೋಘ ಸಾಧನೆ ಮಾಡಿದ ಹೆಮ್ಮೆಯ ವಿಶ್ವವಿದ್ಯಾಲಯವು ಅನುದಾನದ ಕೊರತೆಯಿಂದ ತನ್ನ ಸಂಶೋಧನೆ ಅಭಿವೃದ್ಧಿ ಹಾಗೂ ನಿರ್ವಹಣೆ ಚಟುವಟಿಕೆಗಳಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿರುವುದನ್ನು ಕೇಳಿದ್ದೇನೆ. ಸ್ವತಃ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿಯವರು ಆರ್ಥಿಕ ಸಂಕಷ್ಟಗಳಿಂದಾಗಿ ಉದ್ಭವಿಸಿರುವ ಇಲ್ಲಿನ ಪರಿಣಾಮಗಳನ್ನು ನನ್ನೊಂದಿಗೆ ಹಂಚಿಕೊಂಡಿದ್ದಾರೆ.

ಮುಖ್ಯಮಂತ್ರಿಗಳೊಂದಿಗೆ ಇಲ್ಲಿನ ಎಲ್ಲ ಆರ್ಥಿಕ ಸಂಕಷ್ಟಗಳ ಕುರಿತು ಮಾತನಾಡಿ, ಆದಷ್ಟು ಬೇಗ ಪರಿಹಾರಗಳನ್ನು ಹುಡುಕಿ, ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು, ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕ ವಾಗಿ ಪ್ರಯತ್ನಿಸುತ್ತೇನೆ. ಸ್ವತಃ ಮುಖ್ಯಮಂತ್ರಿಗಳು ಇತ್ತೀಚೆಗೆ ಕರ್ನಾಟಕದಲ್ಲಿ ಶೇ.60ರಷ್ಟು ವಾಣಿಜ್ಯ ಫಲಕಗಳು ಕನ್ನಡದಲ್ಲಿರಬೇಕು ಎನ್ನುವ ತೀವ್ರ ಕಳಕಳಿ ವ್ಯಕ್ತಪಡಿಸಿರುವುದನ್ನು ನೀವು ಬಲ್ಲಿರಿ. ಹಾಗಾಗಿ ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟಗಳನ್ನು ಮುಖ್ಯಮಂತ್ರಿಗಳು ಸಹಾನುಭೂತಿಯಿಂದ ಪರಿಹರಿಸಬಲ್ಲರು ಎನ್ನುವ ನಂಬಿಕೆ ನನಗಿದೆ. ಪದವಿ ಪಡೆದ ಎಲ್ಲ ಪದವೀಧರರು ಕನ್ನಡ ಸಮಾಜದ ಸರ್ವತೋಮುಖ ಏಳಿಗೆಗಾಗಿ ದುಡಿಯುವ ಸಂಕಲ್ಪ ಮಾಡಿರಿ. ನಿಮ್ಮಿಂದ ಕರ್ನಾಟಕದ ಹಾಗೂ ಕನ್ನಡದ ಕೀರ್ತಿ ಮತ್ತಷ್ಟು ಉಜ್ವಲವಾಗಲಿ ಎಂದು ಆಶಿಸುತ್ತೇನೆ ಎಂದರು.

## ಅಮೇರಿಕದ ಕನ್ನಡಿಗರಿಗೆ ಕನ್ನಡ ಕೋರ್ಸ್ ಒಪ್ಪಂದ

ಮೊದಲ ಪುಟದಿಂದ

ವಿಭಾಗಗಳು ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ, ಹಸ್ತಪ್ರತಿ ಸಮ್ಮೇಳನ, ಹಳಗನ್ನಡ ತರಬೇತಿ ಶಿಬಿರ, ಸಾಮಾಜಿಕ ನ್ಯಾಯ-ನಾಯಕತ್ವ ತರಬೇತಿ ಶಿಬಿರ, ವಿಚಾರಸಂಕಿರಣಗಳು, ವಿಶೇಷ ಉಪನ್ಯಾಸಗಳು, ಆನ್‌ಲೈನ್ ಉಪನ್ಯಾಸಗಳನ್ನು ಏರ್ಪಡಿಸಿವೆ.



ದಲಿತ ಸಂಸ್ಕೃತಿ ಅಧ್ಯಯನ ಪೀಠವು 'ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆ ಕುರಿತು' 15 ಸಂಪುಟಗಳ ಯೋಜನೆಯನ್ನು ಕೈಗೊಂಡಿದೆ. ಇದಲ್ಲದೆ 'ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳು' ಕುರಿತು ಮಕ್ಕಳಿಗೆ ಸರಳವಾಗಿ ತಿಳಿಸಲು 22 ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಗಳನ್ನು ಹಮ್ಮಿಕೊಂಡಿದೆ. ಪತ್ರಿಕೋದ್ಯಮ ವಿಭಾಗವು 'ಮೂರು ದಿನಗಳ ರೇಡಿಯೋ ಮತ್ತು ಟಿ.ವಿ.ಕಾರ್ಯಕ್ರಮಗಳ ನಿರ್ಮಾಣ' 'ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸಂವಹನ ಕೌಶಲ್ಯಗಳು' ವಿಷಯ ಕುರಿತು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿತ್ತು.

ವಿಶ್ವವಿದ್ಯಾಲಯವು ತನ್ನ ಕಾರ್ಯಚಟುವಟಿಕೆಗಳನ್ನು ವಿದೇಶದಲ್ಲೂ ವಿಸ್ತರಿಸಿದೆ. ಅಮೆರಿಕಾದ ಕ್ಯಾಲಿಪೋರ್ನಿಯಾದ ಪದಾಂತರಂಗ ಸಂಸ್ಥೆಯ ಸಹಯೋಗದಲ್ಲಿ ಅಲ್ಲಿನ ಕನ್ನಡಿಗರಿಗೆ ಕನ್ನಡ ಕಲಿಕೆಗೆ ಸರ್ಟಿಫಿಕೇಟ್ ಕೋರ್ಸ್ ನಡೆಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

ಅಮೆರಿಕಾದ ಬ್ರಿಡ್ಜ್ ವಾಟರ್ ಸ್ಟೇಟ್ ಯೂನಿವರ್ಸಿಟಿಯೊಂದಿಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಜ್ಞಾನವಿನಿಮಯಕ್ಕೆ ಒಡಂಬಡಿಕೆ ಮಾಡಿಕೊಂಡಿದ್ದೇವೆ.

ಹೀಗೆ ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಅರಿವನ್ನು ವಿಸ್ತರಿಸುವ, ಕನ್ನಡದ ಅಧ್ಯಯನಕ್ಕೆ ಆಕರಗಳನ್ನು ನಿರ್ಮಿಸುವ, ಅಧ್ಯಯನದ ಹೊಸ ಹೊಸ ವಿಧಾನಗಳನ್ನು ರೂಪಿಸುವ ಜೊತೆ ಜೊತೆಯಲ್ಲಿಯೇ ಸಮಾಜದ ಹಿತಚಿಂತನೆಯ ಭಾಗವಾಗಿ ಸುತ್ತಲಿನ ಐದು ಗ್ರಾಮಗಳನ್ನು ದತ್ತು ಪಡೆದು ಅವುಗಳಲ್ಲಿ ಆರೋಗ್ಯ, ಸ್ವಚ್ಛತೆ ಮತ್ತು ಶಿಕ್ಷಣದ ಮಹತ್ವದ ಬಗ್ಗೆ ಅರಿವನ್ನು ಮೂಡಿಸುವ ಕೆಲಸ ಮಾಡುವ ಮೂಲಕ ಕನ್ನಡವನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡಿಗರ ವಿಶ್ವವಿದ್ಯಾಲಯ. ಈ ವಿಶ್ವವಿದ್ಯಾಲಯವನ್ನು ಬೆಳೆಸಲು, ಉನ್ನತ ಸಂಶೋಧನೆಯ ಉತ್ಕೃಷ್ಟ ಕೇಂದ್ರವನ್ನಾಗಿ ರೂಪಿಸಲು ಸರ್ಕಾರದ ನೆರವು ಮತ್ತು ಅಕ್ಷರಪ್ರೇಮಿಗಳ ಬೆಂಬಲ ಅತ್ಯಗತ್ಯವಾಗಿದೆ.

ಕನ್ನಡದ ನಿರಂತರತೆಯ ಕ್ರಿಯೆಯಲ್ಲಿ ವಿಶ್ವವಿದ್ಯಾಲಯದ ಜೊತೆ ಎಲ್ಲರೂ ಸಹಕರಿಸಬೇಕೆಂದು ಕೋರಿದರು.

## ನುಡಿಹಬ್ಬ ದೇಸಿ ಪರಂಪರೆ ಪ್ರತಿಬಿಂಬಿಸುತ್ತದೆ

ಮೊದಲ ಪುಟದಿಂದ



ರವಾನಿಸುವಲ್ಲಿ ಪ್ರಮುಖ ಪಾತ್ರವ ಹಿಸುತ್ತವೆ. ಅಧ್ಯಾಪಕರ ವಿವಿಧ ಅಧ್ಯಯನ ಮತ್ತು ಸಂಶೋಧನಾ ಯೋಜನೆಗಳನ್ನು ಪ್ರಸಾರಾಂಗ (ಪ್ರಕಟಣಾ ವಿಭಾಗ) ಮೂಲಕ ಪುಸ್ತಕಗಳ ರೂಪದಲ್ಲಿ ಪ್ರಕಟಿಸಲಾಗಿದ್ದು, ಆಸಕ್ತ ಓದುಗರನ್ನು ಆಕರ್ಷಿಸುತ್ತಿವೆ. ಪ್ರಸಾರಾಂಗವು ಕನ್ನಡದ ಜೊತೆಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಕೆಲವು ಅಮೂಲ್ಯ ಪುಸ್ತಕಗಳನ್ನು ಪ್ರಕಟಿಸಿದೆ ಎಂದು ತಿಳಿದು ನನಗೆ ಸಂತೋಷವಾಯಿತು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಜ್ಞಾನವನ್ನು ಹರಡಲು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹೆಚ್ಚು ಮೌಲ್ಯಯುತವಾದ ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಅವಶ್ಯಕತೆಯಿದೆ. ವಿಶ್ವವಿದ್ಯಾನಿಲಯವು ಹತ್ತಿರದ ಐದು ಹಳ್ಳಿಗಳನ್ನು ದತ್ತು ತೆಗೆದುಕೊಂಡಿರುವುದು ಮತ್ತು ಅದರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನುಗ್ರಾಮೀಣಪ್ರದೇಶಗಳಿಗೂ ವಿಸ್ತರಿಸಿರುವುದು ಸೂಕ್ತವಾಗಿದೆ. ವಿಶ್ವವಿದ್ಯಾನಿಲಯವು ಉದ್ದೇಶಿಸಿರುವ ಸಮುದಾಯ ಬಾನುಲಿ ಕೇಂದ್ರದ ಮೂಲಕ ಸಾಮಾಜಿಕ ಕಾರ್ಯಕ್ರಮಗಳನ್ನು ವಿಸ್ತರಿಸಲು ಅವಕಾಶವಿದೆ.

ಹಂಪಿ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಮಾದರಿಯಲ್ಲಿ ನಿರ್ಮಿಸಲಾದ ವಿಶ್ವವಿದ್ಯಾನಿಲಯದ ಅನೇಕ ಕಟ್ಟಡಗಳು ಇತಿಹಾಸವನ್ನು ನೆನಪಿಸುತ್ತವೆ. ಗಿರಿಸೀಮೆ ಆವರಣವು ಬುಡಕಟ್ಟು ಸಂಸ್ಕೃತಿಯನ್ನು ಚಿತ್ರಿಸುತ್ತದೆ, ದೇಶದ ಶಿಲ್ಪಕಲೆ ವೈಭವವನ್ನು ಮರುಸೃಷ್ಟಿಸುವ ಶಿಲ್ಪ. ವಿಶ್ವವಿದ್ಯಾನಿಲಯದ ವಸ್ತುಸಂಗ್ರಹಾಲಯವನ್ನು ಇನ್ನಷ್ಟು ಅಭಿವೃದ್ಧಿ ಪಡಿಸಬೇಕಾಗಿದೆ.

ಸಾಂಪ್ರದಾಯಿಕ ವಿಶ್ವವಿದ್ಯಾಲಯದ ಘಟಿಕೋತ್ಸವಗಳಿಗಿಂತ ಭಿನ್ನವಾಗಿ, ಕನ್ನಡ ವಿಶ್ವವಿದ್ಯಾಲಯದ 'ನುಡಿಹಬ್ಬ' ನಮ್ಮ ದೇಸಿ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ನುಡಿಹಬ್ಬದ ವಿಶಿಷ್ಟ ಸಂಪ್ರದಾಯ, ಅಲ್ಲಿ ಅವರನ್ನು ಬಿಳಿ ಉಡುಪಿನಲ್ಲಿ ವೇದಿಕೆಗೆ ಮೆರವಣಿಗೆ ಮಾಡಲಾಗುತ್ತದೆ ಮತ್ತು ಸಂಗೀತ ವಾದ್ಯಗಳೊಂದಿಗೆ, ನಿಜಕ್ಕೂ ನನಗೆ ಮರೆಯಲಾಗದ ಅನುಭವವಾಗಬಹುದು. ಈ ವಿಶಿಷ್ಟ ಕ್ಷಣವನ್ನು ಸೃಷ್ಟಿಸಿದ ಮತ್ತು ಪೋಷಿಸಿದ ಮತ್ತು ವಿಶ್ವವಿದ್ಯಾನಿಲಯದ 33 ನೇ ಘಟಿಕೋತ್ಸವದಲ್ಲಿ ನಾಡೋಜ ಗೌರವ ಪದವಿ ಪಡೆದ ಸಾಧಕರಿಗೆ, ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಪದವಿಧರರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸಿದರು.

## ಕನ್ನಡ ವಿಸ್ತಾರಕ್ಕೆ ಡಿಜಿಟಲ್ ಸ್ಪರ್ಶ ಅಗತ್ಯ

ಮೊದಲ ಪುಟದಿಂದ

ಆರೋಗ್ಯವಂತ ಸಮಾಜದ ದ್ಯೋತಕವೂ ಆಗಿದೆ.

ಯುನೆಸ್ಕೊ ವಿಶ್ವಪಾರಂಪರಿಕ ತಾಣವೆನಿಸಿದ, ಕಲೆ, ಧರ್ಮಗಳ ಸಾಂಸ್ಕೃತಿಕ ತೊಟ್ಟಿಲಾದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯ ನೆಲದಲ್ಲಿ ಸ್ಥಾಪನೆಯಾದ ಕನ್ನಡ ವಿಶ್ವವಿದ್ಯಾಲಯ ನಾಡಿನ ಹೆಮ್ಮೆ. ಹಂಪಿಯು ಪ್ರಾಚೀನ ಕಾಲದಿಂದಲೂ ಕನ್ನಡ, ತಮಿಳು, ತೆಲುಗು, ಸಂಸ್ಕೃತ ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ನೆಲ. ಇಂತಹ ನೆಲದ ಪರಂಪರೆಯನ್ನು ಆಧುನಿಕ ದಿನಗಳಿಗೂ ವಿಸ್ತರಿಸುವ ಜ್ಞಾನ ಕೈಂಕರ್ಯವನ್ನು ಕಳೆದ ಮೂರು ದಶಕಗಳಿಂದ ಕನ್ನಡ ವಿಶ್ವವಿದ್ಯಾಲಯ ಮಾಡುತ್ತ ಬಂದಿದೆ.

ವಿಶ್ವವಿದ್ಯಾಲಯದ ಪ್ರಥಮ ಕುಲಪತಿ ಡಾ.ಚಂದ್ರಶೇಖರ ಕಂಬಾರರ ಪರಿಕಲ್ಪನೆಯಲ್ಲಿ ಕನ್ನಡ ವಿಶ್ವವಿದ್ಯಾಲಯ 1991ರಲ್ಲಿ ಪ್ರಾರಂಭವಾಗಿ ಮಹತ್ತರ ಸಾಧನೆ ಮಾಡಿದೆ. ಭಾಷಾ ನಿಕಾಯ, ಸಮಾಜವಿಜ್ಞಾನಗಳ ನಿಕಾಯ, ಲಲಿತಕಲೆಗಳ ನಿಕಾಯ, ವಿಜ್ಞಾನ ನಿಕಾಯ ಹೀಗೆ ನಾಲ್ಕು ನಿಕಾಯಗಳಲ್ಲಿ ಸುಮಾರು ಹದಿನೆಂಟು ವಿಭಾಗಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ., ಸ್ನಾತಕೋತ್ತರ, ಸ್ನಾತಕ, ಸ್ನಾತಕೋತ್ತರ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮಗಳು ನಡೆಯುತ್ತಿವೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಮಹತ್ತರವಾದ ಅಧ್ಯಯನಗಳು ನಡೆಯುತ್ತಿವೆ. ಕೆಲಸಗಳು ಆಗಿವೆ, ಆಗುತ್ತಿವೆ. ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಭಾಷಾಂತರ ಕ್ಷೇತ್ರದ ಅಧ್ಯಯನಗಳು, ಬುಡಕಟ್ಟು ಮೌಖಿಕ ಕಾವ್ಯ ಪರಂಪರೆಗಳ ಶೋಧ-ಹೀಗೆ ಹಲವು ನೆಲೆಗಳಲ್ಲಿ ಅಧ್ಯಯನಗಳು ಸಾಗಿ ಬಂದಿವೆ. ಸಾಹಿತ್ಯ, ಕಲೆ, ಸಂಸ್ಕೃತಿ ಕೇಂದ್ರಿತವಾದ ಚಿಂತನೆಗಳ ಜೊತೆಗೆ ವಿಜ್ಞಾನ ಕ್ಷೇತ್ರಕ್ಕೂ ವಿಶ್ವವಿದ್ಯಾಲಯದ ಅಧ್ಯಯನ ವ್ಯಾಪ್ತಿಯನ್ನು ವಿಸ್ತರಿಸಿರುವುದು ಶ್ಲಾಘನೀಯ.

ವಿಶ್ವವಿದ್ಯಾಲಯದ ಅತ್ಯುನ್ನತ ಪದವಿಗಳನ್ನು ಪಡೆದ ವಿದ್ಯಾರ್ಥಿಗಳ ಜವಾಬ್ದಾರಿ ಗುರುತರವಾದದ್ದು. ನಿರಂತರ ಅಧ್ಯಯನವನ್ನು ಮುಂದುವರಿಸಿ ಸುಂದರವಾದ ಸಮಾನತೆಯ, ಆರೋಗ್ಯಕರವಾದ, ಮಾನವೀಯ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನಿಸಿ. ಕುವೆಂಪು ಆಶಯದಂತೆ 'ಸರ್ವಜನಾಂಗದ ಶಾಂತಿಯ ತೋಟವನ್ನಾಗಿಸಿ'.

ನೀವು ಎಂಥದ್ದೇ ದೊಡ್ಡ ಸ್ಥಾನ ಪಡೆದಾಗ್ಯೂ ಕೂಡ ವಿನಮ್ರವಾಗಿರಬೇಕು. "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" (ಜ್ಞಾನವಂತರಿಗಿಂತ) ಎಂಬ



ಬಸವಣ್ಣನವರ ವಚನದ ಸಂದೇಶವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಿ.

ಕನ್ನಡ ವಿಶ್ವವಿದ್ಯಾಲಯದ ಅನೇಕ ಸಂಶೋಧನೆಗಳು ಪ್ರಸಾರಾಂಗದ ಪ್ರಕಟಣೆಯ ಮೂಲಕ ಹೊರ ಜಗತ್ತಿಗೆ ತಲುಪುತ್ತಿವೆ. ಜ್ಞಾನಕ್ಕೆ ಬೆಲೆ ಬರಬೇಕಾದರೆ ನೆಲದ ಜನಪದದ ಪರಂಪರಾಗತ ತಿಳುವಳಿಕೆಯ ಜೊತೆಗೆ ಸಮನ್ವಯವನ್ನು ಸಾಧಿಸುವತ್ತ ಆಧುನಿಕ ಜ್ಞಾನವನ್ನು ವಿಸ್ತರಿಸಬೇಕಾಗಿದೆ. ಇದಕ್ಕೆ ಬೇಕಾದ ಶೋಧಗಳು ಇಂದಿನ ದಿನಮಾನಗಳಲ್ಲಿ ಹೆಚ್ಚು ಹೆಚ್ಚು ನಡೆಯಬೇಕಾಗಿರುವುದು ಅಪೇಕ್ಷಣೀಯ.

ಕನ್ನಡದ ಜ್ಞಾನವನ್ನು ಇತರ ಭಾಷೆಗಳಿಗೆ ತಿಳಿಸುವುದು, ಇತರೆ ಭಾಷೆಗಳ ಜ್ಞಾನವನ್ನು ಕನ್ನಡದಲ್ಲಿ ಹೇಳುವುದು ಇಂದು ತಂತ್ರಜ್ಞಾನದ ಮೂಲಕ ಸಾಧ್ಯವಾಗಿದೆ. ಹಾಗೆಯೇ ಕನ್ನಡ ನಾಡು ತನ್ನ ಗಡಿಯನ್ನು ಹಂಚಿಕೊಂಡಿರುವ ಐದು ರಾಜ್ಯಗಳ ಭಾಷೆಗಳೊಡನೆ ಸೌಹಾರ್ದಯುತವಾದ ಸಂಬಂಧವನ್ನು ಬೆಳೆಸುವ ಯೋಜನೆಗಳನ್ನು ಇನ್ನು ಹೆಚ್ಚು ಕಾರ್ಯರೂಪಕ್ಕೆ ತರಬೇಕಾಗಿದೆ. ಹಾಗೆಯೇ ಕನ್ನಡ ನಾಡಿನಲ್ಲಿರುವ ಇತರೆ ಭಾಷೆಗಳಿಗೆ ಸಂಬಂಧಿಸಿದ ಅಧ್ಯಯನಗಳನ್ನು ರೂಪಿಸಿ ಮಾನವೀಯ ಸಂಬಂಧಗಳನ್ನು ಇನ್ನಷ್ಟು ಬೆಸೆಯಬೇಕಾಗಿದೆ. ಈ ನೆಲೆಯಲ್ಲಿ ಕನ್ನಡ ನಾಡು, ನುಡಿ, ನೆಲಗಳ ಸತ್ವವನ್ನು ಇನ್ನಷ್ಟು ಸಮರ್ಥವಾಗಿ ಶೋಧಿಸಬೇಕಾಗಿದೆ.

ಕನ್ನಡ ಜ್ಞಾನವನ್ನು ಡಿಜಿಟಲೀಕರಣಗೊಳಿಸುವುದು ಇಂದಿನ ತುರ್ತು ಅಗತ್ಯಗಳಲ್ಲಿ ಒಂದು. ಅವುಗಳನ್ನು ಎಷ್ಟು ವೇಗವಾಗಿ ಸಾಧ್ಯವಾಗಿಸುತ್ತೇವೆಯೋ ಅಷ್ಟು ವೇಗವಾಗಿ ಕನ್ನಡ ಹಿಗ್ಗುತ್ತದೆ. ಕನ್ನಡ ಪುಸ್ತಕಗಳ ಡಿಜಿಟಲೀಕರಣ, ಕನ್ನಡೇತರ ಭಾಷೆಗಳಿಗೆ ಅನುವಾದ ಇತ್ಯಾದಿಗಳ ಮೂಲಕ ಕನ್ನಡವು ತನ್ನ ಭೌಗೋಳಿಕ ವ್ಯಾಪ್ತಿಯನ್ನು ಮೀರಬೇಕಾಗಿದೆ. ಕನ್ನಡದ ವರ್ಣಮಾಲೆಗಳನ್ನು ಸರಳಗೊಳಿಸಬೇಕು, ಒತ್ತು ಮತ್ತು ದೀರ್ಘಗಳನ್ನು ಕಡಿಮೆಯಾಗಿಸಬೇಕು. ಈ ದಿಸೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಇನ್ನಷ್ಟು ಶ್ರಮಿಸಬೇಕಾಗಿದೆ.

ಪ್ರಸ್ತುತ ಕಾಲಘಟ್ಟದಲ್ಲಿ ಕನ್ನಡ ಸಂಶೋಧನೆಯು ಎಲ್ಲೆ ದಾಟಿ, ಹೊಸಲಿನಿಂದ ಹೊರ ಹೋಗಿ ಎಲ್ಲ ಅಧ್ಯಯನ ಶಾಖೆಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ, ಮೈಗೂಡಿಸಿಕೊಳ್ಳುವ ಅವಸರವಿದೆ. Artificial Intelligence (AI), Machine Learning(ML), Data Science(DS), Precision Agriculture (Farming), One Health ವಿಷಯಗಳು ಮುಂಚೂಣಿಯಲ್ಲಿವೆ. ಕಳೆದ ಮೂರು ವಾರಗಳಿಂದ Grok AI ಎಂಬ ಬುದ್ಧಿಮತ್ತೆ ನಮ್ಮೆಲ್ಲರಿಗಿಂತ ಉತ್ತಮವಾದ ವಿಷಯ ಸಂಗ್ರಹಿಸಿ ವಿಶ್ಲೇಷಣೆ ಮಾಡುತ್ತಿದೆ. ಅದರ ತಿಳುವಳಿಕೆಯೂ ಬಹಳ ಕುತೂಹಲಕಾರಿ ಯಾಗಿದ್ದು, ಅದು ಯೋಚನೆಯನ್ನು ಸಹ ಮಾಡಬಲ್ಲದು ಎಂಬತ್ತಿದ್ದು, ಹಲವು ರಾಜಕೀಯ ಪಕ್ಷಗಳ ಧೃತಿಗೆಡಿಸಿದೆ. ಮುಂದೊಂದು ದಿನ ಈ AI ಗಳು–ವಿಮರ್ಶಕರು, ಕವಿಗಳೂ ಆಗಬಹುದು. ಈ AI ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಿಜ್ಞಾನ ಸಾಹಿತ್ಯವನ್ನು ಕನ್ನಡದಲ್ಲಿ ಸಮೃದ್ಧಗೊಳಿಸುವ ಅವಶ್ಯಕತೆ ಇದೆ. ಅದೇ ರೀತಿ ಕನ್ನಡ ಶಾಸನಗಳನ್ನು ಕನ್ನಡದ ಚರಿತ್ರೆಯನ್ನು ಸರಿಯಾದ ರೀತಿಯಲ್ಲಿ ತ್ವರಿತವಾಗಿ ತಿಳಿಯಲು ಈ AI ತಂತ್ರಜ್ಞಾನ ಸಹಕಾರಿ ಆಗಬಲ್ಲದು.

ಇಷ್ಟೆಲ್ಲಾ ಇದ್ದಾಗ್ಯೂ ಕೂಡ ಈ AI ಅಥವಾ Google ನಿಜವಾದ ಗುರುಗಳಾಗಲಾರವು. ಇವುಗಳು ಕವಿ ಸಂವೇದನೆಗಳಿಗೆ, ಭಾವನೆಗಳಿಗೆ, ಕವಿ ಕಲ್ಪನೆಗೆ, ಕವಿ ಹೃದಯಕ್ಕೆ ಸಮವಾಗಲಾರವು.

ರವಿ ಕಾಣದ್ದನ್ನು ಕವಿ ಕಾಣುತ್ತಾನೆ. ಆದುದರಿಂದ ಸಾಹಿತಿಗಳು, ಕವಿಗಳು ಶರಣರು, ಹರಿದಾಸರು ಎಂದೆಂದಿಗೂ ಪ್ರಸ್ತುತ. ಇವರು ಉತ್ತಮ ಸಮಾಜ ಕಟ್ಟಬಲ್ಲ ಹೃದಯ ನಾಡಿ.

ಈಗ ಕನ್ನಡ ಭಾಷೆಯನ್ನು ಗಟ್ಟಿಗೊಳಿಸುವ ಅವಶ್ಯಕತೆ ಇದೆ. ತಮಿಳುನಾಡಿಗರಂತೆ ಕನ್ನಡಿಗರು ಕನ್ನಡದ ಅಭಿಮಾನ ತಳೆದು ಕಾರ್ಯರೂಪಗೊಳಿಸಬೇಕು. ಏಕೆಂದರೆ ಕನ್ನಡ ನಮ್ಮ ಮಾತೃ ಭಾಷೆ, ನಮ್ಮ ಹೃದಯದ ಭಾಷೆ. ವೈಜ್ಞಾನಿಕ ವಿಷಯಗಳನ್ನೂ ಸಹ ನಾವು ಕನ್ನಡದಲ್ಲೇ ಯೋಚಿಸುತ್ತೇವೆ. ಕನ್ನಡದ ಸರ್ವತೋಮುಖ ಅಭಿವೃದ್ಧಿಯೇ ನಮ್ಮೆಲ್ಲರ ಅಭಿವೃದ್ಧಿ, ನಮ್ಮೆಲ್ಲರ ನೆಮ್ಮದಿ. ಸಮಾಜವನ್ನು, ವೈಜ್ಞಾನಿಕ ಮನೋಭಾವವನ್ನು, ವೈಜ್ಞಾನಿಕ ಸಂಶೋಧನೆಗಳನ್ನು ಅರ್ಥಪೂರ್ಣವಾಗಿ ಕೈಗೊಳ್ಳಲು ಕನ್ನಡವೇ ನಮ್ಮೆಲ್ಲರ ಬುನಾದಿ. ವಿಶ್ವವಿದ್ಯಾಲಯ ಕೈಗೊಳ್ಳುವ ಈ ಬಗೆಯ ಜ್ಞಾನ ಸಂಬಂಧಿ ಕೆಲಸಗಳಲ್ಲಿ ಸಾರ್ವಜನಿಕ ಬೆಂಬಲ, ಸರ್ಕಾರದ ಬೆಂಬಲ ದೊರೆತರೆ ಇವುಗಳನ್ನು ಸುಲಭ ಸಾಧ್ಯವಾಗಿಸಬಹುದು ಎಂದರು.

## ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಕನ್ನಡ ವಿವಿ 33ನೇ ನುಡಿಹಬ್ಬದಲ್ಲಿ ಏಳು ಜನರಿಗೆ ಡಿ.ಲಿಟ್ ಪದವಿ ಪ್ರದಾನ ಮಾಡಿದ ಕ್ಷಣ
























# ಅನಾವಶ್ಯಕವಾಗಿ ನೀರು ವ್ಯಯ ಆಗದಂತೆ ನೋಡಿಕೊಳ್ಳಬೇಕು

## ಪ್ರಭಾರಿ ಪ್ರಾದೇಶಿಕ ಆಯುಕ್ತರಾದ ಎಂ. ಸುಂದರೇಶ ಬಾಬು ಹೇಳಿಕೆ

■ **ಹಂಪಿ ಟೈಮ್ಸ್ ಕೊಪ್ಪಳ**

ತುಂಗಭದ್ರಾ ಎಡದಂಡೆ ಕಾಲುವೆ ನೀರು ಯಾವುದೇ ರೀತಿಯಲ್ಲಿ ಅನಾವಶ್ಯಕವಾಗಿ ವ್ಯಯ ಆಗದಂತೆ ಸಂಬಂದಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಕಲಬುರಗಿ ವಿಭಾಗದ ಪ್ರಭಾರಿ ಪ್ರಾದೇಶಿಕ ಆಯುಕ್ತರಾದ ಎಂ. ಸುಂದರೇಶ ಬಾಬು ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಟಿಎಲಬಿಸಿ ನೀರು ನಿರ್ವಹಣೆ ಕುರಿತು ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು. ತುಂಗಭದ್ರಾ ಎಡದಂಡೆ ನೀರು ನಿರ್ವಹಣೆ ಎಸ್ಇ. ಇಇ ಸಂಬಂದಪಟ್ಟ ತಾಲ್ಲೂಕಿನ ತಹಶಿಲ್ದಾರರು ಸೇರಿದಂತೆ ಇತರೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಜೂಮ್ ವಿಡಿಯೋ ಕಾನ್ಪರೇನ್ಸ್ ಮೂಲಕ ಸಭೆ ನಡೆಸಿ ಮಾತನಾಡಿದರು.




ಸಭೆಯಲ್ಲಿ ಈಗಾಗಲೇ ನಿರ್ಧರಿಸಿದಂತೆ 3 ಸಾವಿರ ಕ್ಯೂಸೆಕ್ಸ್ ನೀರನ್ನು ಪ್ರತಿದಿನ ಬಿಡಬೇಕು. ಸಂಬಂಧಿಸಿದ ಡಿಸ್ಟ್ರಿಬ್ಯೂಟಗಳಲ್ಲಿ ಈಗಾಗಲೇ ಆದೇಶಿಸಿದಂತೆ ಗೇಜಗಳ ನಿಯಂತ್ರಣ ಮಾಡಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು. ಯಾವುದೇ ರೀತಿಯಲ್ಲಿ ನೀರು ಅನಾವಶ್ಯಕವಾಗಿ ವ್ಯಯ ಆಗದಂತೆ ನೋಡಿಕೊಳ್ಳಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಜೂಮ್ ವಿಡಿಯೋ ಕಾನ್ಪರೇನ್ಸ ಸಭೆಯಲ್ಲಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು. ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು. ಅಪರ ಜಿಲ್ಲಾಧಿಕಾರಿಗಳು. ಸಹಾಯಕ ಆಯುಕ್ತರು. ತುಂಗಭದ್ರಾ ಎಡದಂಡೆ ನಿರ್ವಹಣೆ ಎಸ್.ಇ ಹಾಗೂ ಇಇ ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರರು. ಟಾಸ್ಕಫೋರ್ಸ್ ಸಮಿತಿಯವರು ಸೇರಿದಂತೆ ಇತರೆ ಸಂಬಂಧಿಸಿದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಹಂಪಿಯಲ್ಲಿರುವ ಸುಗ್ರೀವ ಗುಹೆ ವೀಕ್ಷಿಸಿದ ರಾಜ್ಯಪಾಲರು



■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಶುಕ್ರವಾರ ಕನ್ನಡ ವಿವಿ ನಾಡೋಜ ಪದವಿ ಪ್ರದಾನಕ್ಕೂ ಮುನ್ನ ಹಂಪಿಯಲ್ಲಿರುವ ಐತಿಹಾಸಿಕ ಸುಗ್ರೀವ ಗುಹೆಗೆ ಭೇಟಿ ನೀಡಿ ವೀಕ್ಷಿಸಿ, ಮಾರ್ಗದರ್ಶಕರಿಂದ ರಾಮಾಯಣದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುವ ಮತ್ತು ಕರ್ನಾಟಕದ ಅಮೂಲ್ಯ ಪರಂಪರೆಯ ಹೆಗ್ಗುರುತಾಗಿರುವ ಈ ಸ್ಥಳದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಾಹಿತಿಯನ್ನು ಪಡೆದರು.ರಾಜ್ಯಪಾಲರು ಹಂಪಿಗೆ ಆಗಮಿಸುವ ಮುನ್ನ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಕೂಡ್ಲಿಗಿ ತಾಲೂಕಿನ ಆಲೂರಿನ ಬಳಿ ರಾಜ್ಯಪಾಲರಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ರಾಜ್ಯಪಾಲರೊಂದಿಗೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್ ಇತರರು ಇದ್ದರು.

## ಹೆಸರು ಸ್ಪಷ್ಟೀಕರಣ

ನಾನು **ಗೌಸಿಯಾ ಬಾನು ಗಂಡ: ಫಕ್ರುದೀನ್**, ವಯಸ್ಸು 41 ವರ್ಷ, ವಾಸ: 28ನೇ ವಾರ್ಡ್, ಚಪ್ಪರದಳ್ಳಿ, ಹೊಸಪೇಟೆ, ವಿಜಯನಗರ ಜಿಲ್ಲೆ. ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಗೌಸಿಯಾ ಬಾನು ಗಂಡ: ಫಕ್ರುದೀನ್ ಮತ್ತು ಶಾಲಾ ದಾಖಲಾತಿಗಳಲ್ಲಿ ನನ್ನ ಹೆಸರು ಉಳ್ಳಾಗಡ್ಡಿ ಗೌರಮ್ಮ ಎಂದಿದ್ದು, ಎರಡೂ ಹೆಸರು ಒಂದೇ, ನನ್ನದೇ ಆಗಿರುತ್ತದೆ ಎಂದು ದಿನಾಂಕ 4.4.2025 ರಂದು ನೋಟರಿ ಚಂದ್ರಶೇಖರ ಆರ್. ಯಲಗೋಡ್ ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸಿರುತ್ತೇನೆ.

## 33ನೇ ನುಡಿಹಬ್ಬದಲ್ಲಿ ಡಿ.ಲಿಟ್. ಪದವಿ ಪಡೆದವರು

**1 ಜ್ಯೋತಿ ಎಂ, ಇಂಗ್ಲಿಷ್** ನಾಟಕಗಳ ಕನ್ನಡ ಅನುವಾದ : ಸವಾಲುಗಳು ಮತ್ತು ಸಾಧ್ಯತೆಗಳು ಭಾಷಾ ನಿಕಾಯ

**2. ಕೆ.ಆರ್. ವಿದ್ಯಾಧರ** 1837ರ ಅಮರಸುಳ್ಯ ಹೋರಾಟ : ಬಹುನಾಯಕತ್ವದ ಅಧ್ಯಯನ ಸಮಾಜವಿಜ್ಞಾನಗಳ ನಿಕಾಯ

**3. ಮುಕ್ತಾ ಬಿ. ಕಾಗಲಿ** ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ : ವ್ಯಕ್ತಿತ್ವ ವಿಕಸನದ ಪ್ರಾಮುಖ್ಯತೆ ಸಮಾಜವಿಜ್ಞಾನಗಳ ನಿಕಾಯ

**4. ತಾರಾನಾಥ ವರ್ಕಾಡಿ** ಕರಾವಳಿ ಕರ್ನಾಟಕದ ಯಕ್ಷಗಾನ ವೃತ್ತಿ ಪರಂಪರೆಯ ಬಹುಮುಖಿ ಅಧ್ಯಯನ ಲಲಿತಕಲೆಗಳ ನಿಕಾಯ

**5. ಸುರೇಂದ್ರ ಪಣಿಯೂರು** ಯಕ್ಷಗಾನ ಮೇಳಗಳ ವಿಕಾಸ ಮತ್ತು ವರ್ತಮಾನದ ಬೆಳವಣಿಗೆ ಲಲಿತಕಲೆಗಳ ನಿಕಾಯ

**6. ರೂಪ ಅಯ್ಯರ್** ಅಧ್ಯಾತ್ಮ ಮತ್ತು ವಿಜ್ಞಾನ ವಿಜ್ಞಾನಗಳ ನಿಕಾಯ


**7. ಜಿ ಪುರುಷೋತ್ತಮಗೌಡ** ತುಂಗಭದ್ರಾ ಜಲಾಶಯ : ಒಂದು ಅಧ್ಯಯನ ವಿಜ್ಞಾನಗಳ ನಿಕಾಯ

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**05–04–2025 – ಶನಿವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ಅತಿಗಂಡ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:16:39 |
| ಸೂರ್ಯಾಸ್ತ | : 18:42:45 |
| ರಾಹು ಕಾಲ | : 09:23–10:56 |
| ಯಮಘಂಡ ಕಾಲ | : 14:03–15:36 |
| ಗುಳಿಕ ಕಾಲ | : 06:17–07:50 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 04–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.66 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9147 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.461 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1580.00 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 868 ಕ್ಯುಸೆಕ್ |
| ಸಾಮರ್ಥ್ಯ | 4.463 ಟಿಎಂಸಿ |

For Ads
Contact:
94486 33038

